GRANT OF WASTE LAND IN INDI TALUK FOR HARIJAN COLONY

486. Sri S. S. ARAKERI (Balloli).—

Will the Minister for Social Welfare be pleased to state.

(*a*) whether the local M. L. A has represented about the grant of waste land in S. No. 370 of Baradal village in Indi Taluk of Bijapur District of Harijan Colony ;

(*b*) whether it is true that the District Social Welfare Officer has recommended for the grant of this land for the Harijan Colony ;

(*c*) the reason for releasing the said land otherwise in spite of the Chairman of the V.P., Barodol favouring it for the Harijan Colony;

(*d*) the stage and the steps taken in releasing the waste land ?

Sri V. L. PATIL (Minister for Social Welfare) :—

(*a*) Yes.

(*b*) No.

(*c*) The land was released for the costruction of a school building for the commcn benefit of the village Kkrithimnaieh.

(*d*) Does not arise in view of the reply to Clause (*c*).

ಶ್ರೀ ಎಸ್ ಎಸ್ ಅರಕೇರಿ: – ನನ್ನ ಪ್ರಶ್ನೆಗೆ ರೆವನ್ಯೂ ಮಂತ್ರಿಗಳು ಉತ್ತರ ಕೊಡಬೇಕಾಗಿತ್ತು. ಆದರೆ ಸಮಾಜ ಕಲ್ಯಾಣ ಮಂತ್ರಿಗಳು ಉತ್ತರ ಕೊಟ್ಟಿರುವುದರಿಂದ ಇದನ್ನು ತಡೆಹಿಡಿಯಬೇಕು.

ಉಪಾಧ್ಯಕ್ಷರು:– ತಾವು ಪ್ರಶ್ನೆ ಕೇಳಿ. ಮಂತ್ರಿಗಳು ಉತ್ತರ ಕೊಡುವರು.

ಶ್ರೀ ಎಸ್. ಎಸ್. ಅರಕೇರಿ:– ಹರಿಜನ ವಸತಿಗಾಗಿ ಭೂಮಿ ಕೇಳಿ ಅದನ್ನು ಕೊಡದೆ ೩೭೦ ನೆಯ ಸರ್ವೆನಂಬರಿನಲ್ಲಿ ೧೦ ಎಕರೆಯಲ್ಲಿ ಒಂದು ಎಕರೆಯನ್ನು ಶಾಲೆಗಾಗಿ ಕೊಟ್ಟಿದ್ದಾರೆ. ಆರು ಎಕರೆ ಹರಿಜನರಿಗೆ ಕೊಡಬೇಕೆಂದು ಸಮಾಜ ಕಲ್ಯಾಣ ಅಧಿಕಾರಿಗಳು ಮತ್ತು ಪಂಚಾಯಿತಿ ಛೇರ್ಮನ್ನರು ಶಿಫಾರಸುಮಾಡಿದ್ದಾರೆ ಆದನ್ನು ಕೊಡದೆ ಶಾಲೆಗೆ ಕೊಟ್ಟಿರುವುದಕ್ಕೆ ಕಾರಣವೇನು ?

†ಶ್ರೀ ವಿ. ಎಲ್. ಪಾಟೀಲ್:– ೧೯೩೮ ರಿಂದ ಹರಿಜನರು ಬೇಡುತ್ತಿದ್ದು ೧೯೪೭ ರಲ್ಲಿ ೩೭೦ನೆ ಸರ್ವೆ ನಂಬರಿನಲ್ಲಿ ಬೇಡವೆಂದು ಹರಿಜನರು ಬರೆದುಕೊಟ್ಟಿದ್ದಾರೆ. ಆ ಜಮೀನಿನಲ್ಲಿ ಮನೆಗಳನ್ನು ಕಟ್ಟಲಿಕ್ಕೆ ಚೆನ್ನಾಗಿ ಆಗುವುದಿಲ್ಲ ಎಂದು ಎಲ್ಲ ಹರಿಜನರು ೧೩ನೇ ಡಿಸೆಂಬರ್ ೧೯೪೭ರಲ್ಲಿ ರೆಪ್ರೆಸೆಂಟೇಷನ್ ಮಾಡಿ ಬರೆದು ಕೊಟ್ಟಿದ್ದಾರೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್:—೧೯೩೭ನೇ ಇಸವಿಯಿಂದಲೂ ಬೇಡಿಕೆ ಇದೆ, ಹರಿಜನರೂ ಬರೆದು ಕೊಟ್ಟಿದ್ದರಿಂದ ಕೈ ಬಿಡಲಾಯಿತು ಎಂದು ಹೇಳಿದರು. ಶಾಲೆಗಾಗಿ ಎಷ್ಟು ಕೊಟ್ಟಿದ್ದಾರೆ! ಇನ್ನೂ ಅಲ್ಲಿ ಜಾಗವಿದ್ದರೆ ಹರಿಜನರ ಬೇಡಿಕೆ ಈಗ ಇದ್ದರೆ, ಆ ಜಾಗವನ್ನು ಅವರಿಗೆ ಕೊಡುತ್ತಾರೆಯೇ?

ಶ್ರೀ ವಿ. ಎಲ್. ಪಾಟೀಲ್:- ಕೆಲವು ಪ್ರದೇಶವನ್ನು ಶಾಲೆಗೆ ಕೊಟ್ಟಿದೆ, ಆಟದ ಮೈದಾನಕ್ಕೆ ಸ್ಥಳ ಬೇಕಾಗುತ್ತದೆ. ಒಂದು ಆಸ್ಪತ್ರೆ ಕಟ್ಟಬೇಕೆಂಬ ಯೋಚನೆ ಇದೆ ಸಮೀಪದಲ್ಲಿಯೇ ಇರುವ ೭೪೬ ಸರ್ವೆ ನಂಬರಿನಲ್ಲಿ ಹರಿಜನರಿಗೆ ಸ್ಥಳ ಕೊಡಬೇಕು ಎಂಬ ಅಭಿಪ್ರಾಯ ಸರ್ಕಾರಕ್ಕೆ ಇದೆ. ಅವರು ಒಪ್ಪಿಗೆ ಕೊಟ್ಟರೆ, ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್. ಎಸ್. ಆರಕೇರಿ:—೭೪೬ನೇ ಸರ್ವೆ ನಂಬರು ಜಮೀನು ಖಾಸಗಿಯವರದು ಇದೆ. ಅದು ಸ್ಮಶಾನ ಭೂಮಿ ಇದೆ. ಹರಿಜನರು ರೆವನ್ಯೂ ಜಮೀನಿನಲ್ಲಿ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸ್ಥಳ ಬೇಕು ಎಂದು ಕೇಳಿದ್ದಾರೆ. ಇದನ್ನು ಹರಿಜನರಿಗೇ ಕೊಡಬೇಕೆಂದು ಊರಿನ ರೆಸಲ್ಯೂಷನ್ ಇದೆ. ೧೯೪೭ರಲ್ಲಿ ಒಂದು ಬಿಳಿ ಹಾಳೆಯಲ್ಲಿ ಎಲ್ಲ ಹರಿಜನರ ಸೈನುಗಳನ್ನೂ ಪಡೆದುಕೊಂಡು ಮಾನ್ಯ ಮಂತ್ರಿಗಳು ಹೇಳಿರುವಂತೆ ಬರೆದು ಕೊಟ್ಟಿರಬಹುದು. ಪಂಚಾಯಿತಿಯವರು ರೆಕಮೆಂಡ್ ಮಾಡಿ ರೆಸಲ್ಯೂಷನ್ ಸಹ ಮಾಡಿದ್ದಾರೆ. ಈಗಲಾದರೂ ಈ ಸ್ಥಳವನ್ನು ಸರ್ಕಾರದವರು ಕೊಡಿಸುತ್ತಾರೆಯೇ?

ಶ್ರೀ ವಿ. ಎಲ್. ಪಾಟೀಲ್: -ಸರ್ವೆ ನಂಬರ್ ೩೭೦ರಲ್ಲಿ ಆಸ್ಪತ್ರೆ ಸಲುವಾಗಿ ಅಲಾಟ್ ಮಾಡಿದೆ, ಆಟದ ಮೈದಾನಕ್ಕೆ ಸ್ಥಳಬೇಕಾಗುತ್ತದೆ. ನಾಲೆ ಇರುವುದರಿಂದ ಸ್ವಲ್ಪ ಜಾಗ ಆಗುತ್ತಿರುತ್ತದೆ. ೭೪೬ ಸರ್ವೆ ನಂಬರ್ ಜೆನ್ನಾಗಿಲ್ಲವೆಂದರೆ, ಮತ್ತೊಂದು ಸ್ಥಳವನ್ನು ತೋರಿಸಿದರೆ ಸರ್ಕಾರ ಅವರ ಬಗ್ಗೆ ಯೋಚನೆ ಮಾಡುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್:—ಪಂಚಾಯಿತಿ ರೆಸಲ್ಯೂಷನ್ ಆಗಿದ್ದರೂ ಸಹ ಅದಕ್ಕೆ ಮಾನ್ಯತೆ ಕೊಡದೆ, ಪಂಚಾಯಿತಿ ರೆಸಲ್ಯೂಷನ್ನಿಗೆ ವಿರೋಧವಾಗಿ ಬೇರೆ ಕೆಲಸಗಳಿಗೆ ಕೊಟ್ಟಿರುವುದಕ್ಕೆ ಕಾರಣವೇನು?

ಶ್ರೀ ವಿ.ಎಲ್. ಪಾಟೀಲ್:—ಅಲ್ಲಿ ಮನೆಗಳನ್ನು ಕಟ್ಟಿದರೆ ಸೀಪೇಜ್ ಬರುತ್ತದೆ, ನಾಲಾ, ಬಂದಾರ ಇದೆ ಎನ್ನುವ ಇನ್‌ಫರ್ಮೇಷನ್ ಬಂದಿದೆ.

Sri B. B. SAYNAK: May I know what is the acreage of land comprised in S. No. 370 and how much land is released for the construction of school building for the common benefit of the village and on what date?

ಶ್ರೀ ವಿ. ಎಲ್. ಪಾಟೀಲ್—ಸುಮಾರು ಹತ್ತುಎಕರೆ ಇದೇ. ಯಾವ ತಾರೀಖಿಗೆ ಕೊಟ್ಟಿದ್ದಾರೆ ಎನ್ನುವುದು ನನ್ನ ಕಡೆಗೆ ಇಲ್ಲ.

Sri B. B. SAYANAK:—I am asking you, how much land is released for the construction of school building?

ಶ್ರೀ ವಿ. ಎಲ್. ಪಾಟೀಲ್:—ಶಾಲೆಗೆ ಒಂದು ಎಕರೆ ಇರಬಹುದು, ಆಟದ ಮೈದಾನಕ್ಕೆ ಎರಡು ಎಕರೆ ಬೇಕು ಎನ್ನುವ ಅಭಿಪ್ರಾಯವಿದೆ. ಆಸ್ಪತ್ರೆ ಕೂಡ ಅದರ ಪಕ್ಕದಲ್ಲಿಯೇ ಇರಬೇಕು ಎನ್ನುವ ಯೋಚನೆ ಇದೆ.

ಶ್ರೀ ಎಸ್. ಎಸ್. ಆರಕೇರಿ:—ಅಲ್ಲಿ ನಾಲಾ ಯಾವುದೂ ಇಲ್ಲ ಸರ್ವೇ ನಂಬರು ಡ್ರೈ ಆಗಿದೆ. ೩೭೦ನೇ ಸರ್ವೇ ನಂಬರ್ ಜಮೀನು ಸಂಸ್ಥಾನದ ಜಮೀನು. ಅದರಲ್ಲಿ ಸ್ಥಳ ಕೊಡಬೇಕೆಂದು ಹರಿಜನರು ಕೇಳುತ್ತಿದ್ದಾರೆ. They have written a letter that sites have been already sanctioned for the temple purpose. Therefore clearly six acres is available and I would like to know, whether he can reconsider this in view of the availability of the land ?

ಶ್ರೀ ವಿ. ಎಲ್. ಪಾಟೀಲ್:—ಆ ಸರ್ವೇ ನಂಬರಿನಲ್ಲಿ ಹೆಚ್ಚು ಸ್ಥಳವಿದ್ದರೆ ಯೋಚನೆ ಮಾಡಬಹುದು.